ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 124/2018**
**C/w 23/2023**
**C/w 311/2023**
**C/w 42/2026**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **22.06.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಠಾಣೆಯಲ್ಲಿ 5 – 6 ಜನರನ್ನು ಪೊಲೀಸರು ತೋರಿಸಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ. ನಿಶಾನೆ.ಪಿ. 3 ಮತ್ತು 4 ಫೋಟೋಗಳಲ್ಲಿ ಕಾಣುವ ವಾಹನವನ್ನು ಪೊಲೀಸರು ತೆಗೆದುಕೊಂಡರು. ನನ್ನ ಅಣ್ಣ ರಿಯಲ್ ಎಸ್ಟೇಟ್ ವ್ಯವಹಾರವನ್ನು 5 – 6 ವರ್ಷಗಳಿಂದ ಮಾಡುತ್ತಿದ್ದರು. 2 ನೇ ಆರೋಪಿ ವಜ್ರೇಶ್ ರವರು ನನ್ನ ಅಣ್ಣನ ಜೊತೆಯಲ್ಲಿ ಇರುತ್ತಿದ್ದರು. 2012 ರಿಂದ 2 ನೇ ಆರೋಪಿ ಮತ್ತು ನನ್ನ ಅಣ್ಣನಿಗೆ ಆಗುತ್ತಿರಲಿಲ್ಲ. ಯಾವ ಕಾರಣಕ್ಕೆ ಅವರಿಬ್ಬರಿಗೂ ಆಗುತ್ತಿರಲಿಲ್ಲ ಎಂದು ಗೊತ್ತಿಲ್ಲ. ಇಬ್ಬರು ಕಿತ್ತಾಡಿಕೊಂಡು ಮಾತನಾಡುತ್ತಿರಲಿಲ್ಲ.

2. ನನ್ನ ಅಣ್ಣ, 7 ನೇ ಆರೋಪಿ ಮನು, ಮಂಜುನಾಥ ಹಾಗೂ ಮಧು ಮತ್ತು ಪ್ರಕಾಶ್ ರವರೊಂದಿಗೆ ಆರತಿ ಹುಕ್ಕಡ ಮಾರಮ್ಮ ದೇವಸ್ಥಾನಕ್ಕೆ ಹೋಗಿದ್ದರು. ರಾತ್ರಿ ಸಮಯ ಚಂದ್ರು ರವರ ಕರೆ ಮಾಡಿ ಮನು ಗಲಾಟೆಯಾಗಿದೆ ಅಲ್ಲಿ ಹೋಗಿ ನೋಡಿ ಎಂದು ಹೇಳಿದ. ಅಲ್ಲಿ ಹೋಗಿ ನೋಡಿದಾಗ ನಮ್ಮ ಅಣ್ಣನ ಕೊಲೆಯಾಗಿತ್ತು. ಈಗ ನನಗೆ ತೋರಿಸಿದ ನಿಶಾನೆ.ಪಿ. 3 ರಿಂದ 7 ರ ಫೋಟೋಗಳಲ್ಲಿ ನಮ್ಮ ಅಣ್ಣನ ಶವ ಕಾಣಿಸುತ್ತದೆ. ಪೊಲೀಸರು 2 ದಿನ ಬಿಟ್ಟು ನನ್ನನ್ನು ಠಾಣೆಗೆ ಕರೆಸಿದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಪೊಲೀಸರು ತೋರಿಸಿದ್ದರು. ಇವರೆ ನಮ್ಮ ಅಣ್ಣನನ್ನು ಕೊಲೆ ಮಾಡಿದ್ದು ಎಂದು ಹೇಳಿದ್ದರು. ಪೊಲೀಸರು ಮಹಜರ್ ಗೆ ಬಂದಾಗ ಸ್ಥಳದದಿಂದ ಗಾಜಿನ ಮಣ್ಣು ಇವುಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಮು.ಮಾ. 1 ರಿಂದ 7 ಅನ್ನು ಆ ದಿನ ಪೊಲೀಸರು ಜಪ್ತಿ ಮಾಡಿಕೊಂಡಿದ್ದು ಅವುಗಳನ್ನು ನನಗೆ ಗುರುತಿಸಲು ಆಗುವುದಿಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **CKN** ವಕೀಲರಿಂದ : ಸಮಯ ಕೋರಿದ್ದು, ನೀಡಲಾಯಿತು.

(ಈ ಸಾಕ್ಷಿದಾರರನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.